# ಕಿಮ್ ಮತ್ತು ಜಾಹೀರಾತು



ವಿವಾದಗಳು ಕಿಮ್ ಕರ್‌ದಶಿಯನ್‌ಗೆ ಹೊಸತಲ್ಲ. ಈ ವಿವಾದಗಳೇ ಆಕೆಯ ಸೆಲೆಬ್ರಿಟಿ ವರ್ಚಸ್ಸನ್ನು ಹೆಚ್ಚಿಸಿವೆ. ಈಗ ಹೊಸ ವರ್ಷದ ಹೊಸ್ತಿಲಲ್ಲಿ ಮತ್ತೊಂದು ವಿವಾದವನ್ನು ಟೀವಿ ಸೂಪರ್‌ಸ್ಟಾರ್ ತನ್ನ ಮೈಮೇಲೆ ಎಳೆದುಕೊಂಡಿದ್ದಾಳೆ. 38ರ ಹರೆಯದ ಈ ಅಮೆರಿಕನ್ ಕೃಷ್ಣಸುಂದರಿ ತನ್ನ ನೀಳಕಾಯವನ್ನೇ ಜಾಹೀರಾತಿನ ಸರಕಾಗಿ ಬಳಸಿಕೊಂಡು ಪಡೆದ ಜನಪ್ರಿಯತೆ ಅಷ್ಟಿಷ್ಟಲ್ಲ. ಈಕೆಯ ಸೆಕ್ಸಿ ಫಿಗರ್‌ನಿಂದಾಗಿ ಯುವ ಅಭಿಮಾನಿಗಳ ದೊಡ್ಡ ದಂಡೇ ಬೆನ್ನಿಗಿದೆ. ಆದರೆ ಈ ಅಭಿಮಾನಿಗಳಿಂದ ಪದೇ ಪದೇ ಟೀಕಿಸಿಕೊಳ್ಳುವುದೂ ಆಕೆಗೆ ಅಭ್ಯಾಸವಾಗಿದೆ. ಹೊಸ ವಿವಾದ ಏನೆಂದರೆ, 'ಊಟ ಬಿಡಿ, ಈ ಪಾನೀಯ ಕುಡಿಯಿರಿ' ಎನ್ನುವ ಆಕೆಯ ಜಾಹೀರಾತು. ನ್ಯೂಟ್ರಿಷನ್ ಪಾನೀಯವೊಂದಕ್ಕೆ ಮಾಡೆಲ್ ಆಗಿರುವ ಕಿಮ್, ಬಾತ್ ಟಬ್‌ನಲ್ಲಿ ಗೆಳೆಯರ ಜೊತೆಗೆ ನಿಂತು ಜಾಹೀರಾತಿಗೆ ಪೋಸ್ ನೀಡಿದ್ದಾಳೆ. 'ಊಟ ಬಿಡಿ. ಇದನ್ನು ಕುಡಿಯಿರಿ. ನಾನಂತೂ ಈಗ ಈ ಪಾನೀಯ ಕುಡಿದು ತುಂಬ ಸಂತೋಷವಾಗಿದ್ದೀನಿ. ನನ್ನ ಹೊಟ್ಟೆ ಇನ್ನಷ್ಟು ತೆಳ್ಳಗಾಗಿದೆ...' ಎಂದೆಲ್ಲ ಆಕೆ ಜಾಹೀರಾತಿನಲ್ಲಿ ಹೇಳಿಕೊಂಡಿದ್ದಾಳೆ.

ಕಿಮ್ ಯಾವುದೇ ವಸ್ತುವಿಗೆ ಮಾಡೆಲ್ ಆದರೂ ಲಕ್ಷಾಂತರ ಜನ ಅದನ್ನು ನೋಡುತ್ತಾರೆ. ಸಾಮಾಜಿಕ ಜಾಲತಾಣದಲ್ಲಂತೂ ಈಕೆ ಅತ್ಯಂತ ಜನಪ್ರಿಯೆ. ಇನ್‌ಸ್ಟಾಗ್ರಾಮ್‌ನಲ್ಲಿ ಈಕೆಯನ್ನು ಹಿಂಬಾಲಿಸುವವರ ಸಂಖ್ಯೆ 123.8 ದಶಲಕ್ಷ ದಾಟಿದೆ. ಸಾಮಾಜಿಕ ಜಾಲತಾಣದಲ್ಲಿ ಅತ್ಯಧಿಕ ಹಿಂಬಾಲಕರನ್ನು ಹೊಂದಿರುವ ವಿಶ್ವದ ಆರನೇ ಸೆಲೆಬ್ರಿಟಿ ಈಕೆ. ಹಾಗಾಗಿ ಸಹಜವಾಗಿಯೇ ಈ ಹೊಸ ಜಾಹೀರಾತನ್ನೂ ಲಕ್ಷಾಂತರ ಜನರು ನೋಡಿದ್ದಾರೆ. ಆದರೆ ಮೆಚ್ಚಿದವರ ಸಂಖ್ಯೆ ಬಹಳ ಕಡಿಮೆ. ಬದಲಾಗಿ ಅತ್ಯಧಿಕ ಜನರು ಈಕೆಯ 'ಊಟ ಬಿಡಿ' ತತ್ವವನ್ನು ಹಿಗ್ಗಾಮುಗ್ಗಾ ಟೀಕಿಸಿದ್ದಾರೆ. ಕೆಲವರಂತೂ ಸಿಟ್ಟಿನಿಂದ ಪ್ರತಿಕ್ರಿಯೆ ನೀಡಿದ್ದಾರೆ. 'ನಿನ್ನ ಮೂವರು ಮಕ್ಕಳಿಗೆ ನೀನು ಊಟ ಬಿಡಿಸುತ್ತೀಯಾ?' ಎಂದೊಬ್ಬ ಅಭಿಮಾನಿ ಕಟುವಾಗಿ ಪ್ರಶ್ನಿಸಿದ್ದಾನೆ. ಹೆಣ್ಣುಮಕ್ಕಳ ಆಹಾರ ಪೋಷಕಾಂಶ ಕೊರತೆಯ ಕುರಿತು ಎಚ್ಚರ ಮೂಡಿಸುತ್ತಿರುವ ಕೆಲವು ಸಂಸ್ಥೆಗಳಂತೂ, ಕಿಮ್ ಎಳೆಯ ಹೆಣ್ಣುಮಕ್ಕಳನ್ನು ದಾರಿತಪ್ಪಿಸುತ್ತಿರುವುದರ ಬಗ್ಗೆ ಕಿಡಿ ಕಾರಿವೆ. ಜಾಲತಾಣಗಳಲ್ಲಿ ಎಷ್ಟೇ ಟೀಕೆಗಳು ಎದುರಾದರೂ ಕಿಮ್ ಕುಟುಂಬ ಅದಕ್ಕೆ ಬೇಸರ ಮಾಡಿಕೊಂಡಂತಿಲ್ಲ. ಮರುದಿನ ಈಕೆಯ ಅಕ್ಕ ಕೂಡಾ ಇನ್ನೊಂದು ಆರೋಗ್ಯ ಪಾನೀಯದ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದಾಳೆ.

ಈ ಹಿಂದೆಯೂ ಕಿಮ್ ದೇಹತೂಕ ಇಳಿಸುವ ಮಾತ್ರೆಯೊಂದಕ್ಕೆ ಮಾಡೆಲ್ ಆಗಿ ವಿವಾದ ಸೃಷ್ಟಿಸಿದ್ದುಂಟು. ಈ ಮಾತ್ರೆಯನ್ನು ಬಳಸಿದ ಗ್ರಾಹಕರೊಬ್ಬರು, 'ಇದರಿಂದ ಯಾವುದೇ ರೀತಿಯಲ್ಲಿ ತೂಕ ಇಳಿದಿಲ್ಲ, ಬದಲಾಗಿ ಅನಾರೋಗ್ಯ ಸಮಸ್ಯೆ ಉಲ್ಬಣಿಸಿದೆ' ಎಂದು ಮೊಕದ್ದಮೆ ಹೂಡಿದ್ದರು. ಮೊಕದ್ದಮೆ ಹೂಡಿದವರ ಜೊತೆಗೆ ಕಂಪನಿ ರಾಜಿ ಪಂಚಾಯ್ತಿ ಮಾಡಿಕೊಂಡು ಪರಿಹಾರ ನೀಡಿತ್ತು. ಆದರೆ ಅಷ್ಟರೊಳಗೆ ಆ ಮಾತ್ರೆಯ ಮೂಲಕ ಕೋಟ್ಯಂತರ ಡಾಲರ್ ಲಾಭ ಬಾಚಿಕೊಂಡೂ ಆಗಿತ್ತು. ಮೊಕದ್ದಮೆಗಳು ಕಿಮ್‌ಗೆ ಹೊಸತಲ್ಲ. ಹಲವರ ಮೇಲೆ ಮೊಕದ್ದಮೆ ದಾಖಲಿಸಿ ಈಕೆಯೂ ರಾಜಿ ಪಂಚಾಯ್ತಿ ಮೂಲಕ ಸಾಕಷ್ಟು ಪರಿಹಾರ ಹಣ ಪಡೆದುಕೊಂಡದ್ದಿದೆ. 2007ರಲ್ಲಿ ಈಕೆ ಗೆಳೆಯನೊಬ್ಬನ ಜೊತೆಗೆ ಚಿತ್ರೀಕರಿಸಿದ ಸೆಕ್ಸ್ ಟೇಪ್ ಲೀಕ್ ಆದಾಗ, ಈಕೆ ಹೂಡಿದ ಮೊಕದ್ದಮೆ ಬಹಳ ದೊಡ್ಡ ಸುದ್ದಿಯಾಗಿತ್ತು. ಮೊಕದ್ದಮೆ ಹಿಂತೆಗೆದುಕೊಳ್ಳಲು ಆಗ ಈಕೆ 50 ಲಕ್ಷ ಅಮೆರಿಕನ್ ಡಾಲರ್ ಪಡೆದುಕೊಂಡಿದ್ದಳು. ಕಿಮ್ ತನ್ನದೇ ಹೆಸರಿನ ಸಾಕಷ್ಟು ಬ್ರ್ಯಾಂಡೆಡ್ ಬಟ್ಟೆಬರೆ, ಪರಿಮಳ ದ್ರವ್ಯಗಳನ್ನು ಮಾರುಕಟ್ಟೆಗೆ ಬಿಟ್ಟಿದ್ದಾಳೆ. ಗೋಲ್ಡ್, ಗ್ಲ್ಯಾಮ್ ಮುಂತಾಗಿ ಹಲವು ಹೆಸರುಗಳುಳ್ಳ ಈಕೆಯ ಪರಿಮಳದ್ರವ್ಯ ಉತ್ಪನ್ನಗಳು ಹೆಸರುವಾಸಿಯಾಗಿವೆ. ಇತ್ತೀಚೆಗೆ ಓಲ್ಡ್ ನೇವಿ ಕಂಪನಿಯ ವಿರುದ್ಧವೂ ಈಕೆ ದಾವೆ ಹೂಡಿದ್ದಳು. ಆ ಕಂಪನಿ ತನ್ನ ಪರಿಮಳ ದ್ರವ್ಯದ ಜಾಹೀರಾತಿಗೆ ತನ್ನಂತೆಯೇ ಕಾಣುವ ಮಾಡೆಲ್ ಒಬ್ಬಳನ್ನು ವೀಡಿಯೊಗೆ ಬಳಸಿಕೊಂಡು ಗ್ರಾಹಕರಿಗೆ ಮೋಸ ಮಾಡಿದೆ ಎನ್ನುವುದು ಈಕೆಯ ದೂರಾಗಿತ್ತು. ಆ ವ್ಯಾಜ್ಯವೂ ಕೊನೆಗೆ ದೊಡ್ಡ ಮೊತ್ತದ ಪರಿಹಾರಕ್ಕೆ ಕೋರ್ಟಿನ ಹೊರಗೆ ಅಂತ್ಯ ಕಂಡಿತು.

ಸದ್ಯಕ್ಕೆ ನಾಲ್ಕನೇ ಮಗುವನ್ನು ನಿರೀಕ್ಷಿಸುತ್ತಿರುವ ಕಿಮ್, ಆ ಮೂಲಕವೂ ಚರ್ಚೆಯ ವಿಷಯವಾಗಿದ್ದಾಳೆ. ಮೊದಲ ಇಬ್ಬರು ಮಕ್ಕಳನ್ನು ಸ್ವತಃ ಹೆತ್ತಿರುವ ಈಕೆ ಮೂರನೆಯ ಮಗುವನ್ನು ಬಾಡಿಗೆ ತಾಯಿಯೊಬ್ಬರ ಮೂಲಕ ಪಡೆದಿದ್ದಾಳೆ. ಆ ಮಗುವಿಗೆ ಇನ್ನೂ ವರ್ಷ ತುಂಬಿಲ್ಲ. ಅದಾಗಲೇ ಇನ್ನೊಂದು ಮಗುವನ್ನು ಇನ್ನೊಬ್ಬ ಬಾಡಿಗೆ ತಾಯಿಯ ಮೂಲಕ ಪಡೆಯುತ್ತಿರುವುದಾಗಿ ಹೇಳಿದ್ದಾಳೆ. ಮೇ ತಿಂಗಳಲ್ಲಿ ಈ ನಾಲ್ಕನೆಯ ಮಗು ಈಕೆಯ ಕುಟುಂಬವನ್ನು ಸೇರುವ ಸಾಧ್ಯತೆ ಇದೆ. ಒಂದು ಕಾಲದಲ್ಲಿ ಖ್ಯಾತ ಉದ್ಯಮಿ ಪ್ಯಾರಿಸ್ ಹಿಲ್ಟನ್‌ನ ನಿಕಟ ಗೆಳತಿ ಹಾಗೂ ಸ್ಟೈಲಿಸ್ಟ್ ಆಗಿದ್ದ ಕಿಮ್, ಈಗ ತಾನೇ ಫ್ಯಾಷನ್ ಜಗತ್ತು ಮತ್ತು ಫಿಟ್‌ನೆಸ್ ಜಗತ್ತಿನಲ್ಲಿ ಸೂಪರ್‌ತಾರೆಯಾಗಿದ್ದಾಳೆ. 350 ದಶಲಕ್ಷ ಡಾಲರ್ ಆಸ್ತಿ ಹೊಂದಿ ಫೋರ್ಬ್ಸ್ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಕಿಮ್, ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವಾಗ ಸಾಮಾಜಿಕ ಜವಾಬ್ದಾರಿಯನ್ನು ನಿರ್ಲಕ್ಷ್ಯಿಸಬಾರದು ಎನ್ನುವುದು ಆಕೆಯ ಅಭಿಮಾನಿಗಳ ಅಂಬೋಣ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.

RNI No 7891/65